# ಮೈಸೂರು ವಿಶ್ವವಿದ್ಯಾನಿಲಯ

**Estd-1916**

**(Re-accredited by NAAC with CGPA 3.47 on four point scale with A grade)**

ಕುಲಸಚಿವ (ಪರೀಕ್ಷಾಂಗ) ರವರ ಕಾರ್ಯಾಲಯ,
ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570 005.

ಸಂಖ್ಯೆ:ಪ.ವಿ.8.4/64/2011-12 ದಿನಾಂಕ : 08-10-2015.

## ಅಧಿಸೂಚನೆ

ವಿಷಯ: ಡಿಸೆಂಬರ್- 2015 ಬಿ.ಎಡ್ (RIMSE) ಪದವಿಯ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸುವ ಬಗ್ಗೆ.

ಉಲ್ಲೇಖ: ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಅವರ ಅಧಿಸೂಚನೆ ಸಂಖ್ಯೆ:ಎಸಿ.6/158/2015-16 ದಿನಾಂಕ: 02-09-2015.

*****

ಡಿಸೆಂಬರ್ - 2015ರಲ್ಲಿ ನಡೆಯಲಿರುವ ಬಿ.ಎಡ್ (RIMSE) ಪದವಿಯ (ಸಿ.ಬಿ.ಸಿ.ಎಸ್ ಸ್ಕೀಂ) ಮೊದಲನೇ ಸೆಮಿಸ್ಟರ್‌ನ ಲಿಖಿತ ಪರೀಕ್ಷೆಗಳು ದಿನಾಂಕ 15.12.2015 ರಿಂದ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ (RIMSE), ಯಾದವಗಿರಿ, ಮೈಸೂರು, ಇಲ್ಲಿ ನಡೆಯಲಿವೆ. ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಅರ್ಜಿ ಮತ್ತು ಪರೀಕ್ಷಾ ಶುಲ್ಕವನ್ನು ಸಂಸ್ಥೆಯ ಪ್ರಾಂಶುಪಾಲರ ಮೂಲಕ ಕುಲಸಚಿವ (ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರಿಗೆ ಸಲ್ಲಿಸಲು ತಿಳಿಸಲಾಗಿದೆ. ವಿವರವಾದ ಪರೀಕ್ಷಾ ವೇಳಾಪಟ್ಟಿಯನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು.

1. ಪರೀಕ್ಷಾ ಶುಲ್ಕ ಮತ್ತು ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ : 30-10-2015.
2. ಪರೀಕ್ಷಾ ಅರ್ಜಿಗಳು ಅಭ್ಯರ್ಥಿನಾಪಟ್ಟಿ, ಪ್ರವೇಶ ಪತ್ರ ಹಾಗೂ ಪ್ರಶ್ನೆಪತ್ರಿಕೆ ಬೇಡಿಕೆ ಪಟ್ಟಿಗಳನ್ನು ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ಅಂತಿಮ ದಿನಾಂಕ : 03-11-2015.

### ನಿಗದಿಪಡಿಸಿರುವ ಪರೀಕ್ಷಾ ಶುಲ್ಕದ ದರಗಳು

| | |
|---|---|
| **ಪೂರ್ಣ ಪರೀಕ್ಷೆಗೆ** | **: ರೂ.900.00** |
| **ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆಯೊಂದಿಗೆ)** | **: ರೂ.530.00** |
| **ಒಂದು ವಿಷಯಕ್ಕೆ (ಪ್ರಾಯೋಗಿಕ ಪರೀಕ್ಷೆ ಇಲ್ಲದೆ ಇರುವ)** | **: ರೂ.305.00** |

**ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ (ಪದವಿ ಪ್ರಮಾಣ ಪತ್ರ ಹಾಗೂ ತಾತ್ಕಾಲಿಕ ಉತ್ತೀರ್ಣ ಪ್ರಮಾಣ ಪತ್ರ)**

ಅ) ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ - **ರೂ.1355 + ರೂ.385 = ರೂ.1,740.00**

ಆ) ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ/ಕ್ಯಾಟಗರಿ – 1 = **ರೂ.675 + ರೂ.385 = ರೂ.1060.00**

ಸೂಚನೆಗಳು:

1. ಮೇಲ್ಕಂಡ ಶುಲ್ಕಗಳ ಜೊತೆಗೆ (ಪರೀಕ್ಷಾ ಶುಲ್ಕ ರಿಯಾಯಿತಿಗೆ ಅರ್ಹರಾಗುವ ವಿದ್ಯಾರ್ಥಿಗಳೂ ಸೇರಿದಂತೆ) ಎಲ್ಲರೂ ಅಂಕಪಟ್ಟಿ ಶುಲ್ಕ **ರೂ.215/-** ಗಳನ್ನು ಪಾವತಿಸಬೇಕು.

2. ಶುಲ್ಕವನ್ನು ನಗದು/ಚೆಕ್/ಚಲನ್ ಇತ್ಯಾದಿಗಳ ಮೂಲಕ ಸ್ವೀಕರಿಸಲಾಗುವುದಿಲ್ಲ. ಪಾವತಿಸಬೇಕಾದ ಒಟ್ಟು ಶುಲ್ಕಕ್ಕೆ ಬೇಡಿಕೆ ಹುಂಡಿಯನ್ನು ಹಣಕಾಸು ಅಧಿಕಾರಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ಇವರ ಹೆಸರಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ವಿಶ್ವವಿದ್ಯಾನಿಲಯ ಶಾಖೆ, ಮೈಸೂರು, ಇಲ್ಲಿ ಸಂದಾಯವಾಗುವಂತೆ ಪಡೆದು ದಿನಾಂಕ : 3.11.2015 ಒಳಗೆ ಪರೀಕ್ಷಾ ವಿಭಾಗಕ್ಕೆ ಕಳುಹಿಸುವುದು.

3. ಆಂತರಿಕ ಅಂಕಗಳನ್ನು ಸರಿಯಾದ ಕೋಡ್ ಸಂಖ್ಯೆಯೊಂದಿಗೆ ವಿಷಯವಾರು ಪ್ರತ್ಯೇಕವಾಗಿ ಕಳುಹಿಸುವುದು. (ಲಿಖಿತ ಪರೀಕ್ಷೆಗಿಂತ ಮೊದಲು).

4. ವಿಶ್ವವಿದ್ಯಾನಿಲಯದಿಂದ ವಿದ್ಯಾರ್ಥಿಗಳ ಪ್ರವೇಶ ಅನುಮೋದನೆ ಆಗದಿರುವಂತಹ ವಿದ್ಯಾರ್ಥಿಗಳಿಗೆ ಯಾವ ಸಂದರ್ಭದಲ್ಲಿಯೇ ಆಗಲಿ ಪರೀಕ್ಷಾ ಶುಲ್ಕವನ್ನು ಪಾವತಿ ಮಾಡಲು ಮತ್ತು ಪರೀಕ್ಷೆಗಾಗಿ ಅರ್ಜಿಸಲ್ಲಿಸಲು ಅವಕಾಶ ನೀಡಬಾರದು ಹಾಗೂ ವಿಶ್ವವಿದ್ಯಾನಿಲಯವು ಸಹ ಅನುಮತಿ ನೀಡುವುದಿಲ್ಲ. ಈ ಸಂಬಂಧ ಪ್ರಾಂಶುಪಾಲರು ಅಭ್ಯರ್ಥನಾ ಪಟ್ಟಿಯಲ್ಲಿ ದೃಢೀಕರಿಸಬೇಕು.

5. **ಉಲ್ಲೇಖ ವಿಘ/1/9/2013-14, ದಿನಾಂಕ: 25-09-2013 ಪ್ರಕಾರ 2013-14ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ/ಡಿಪ್ಲೋಮ/ಕೋರ್ಸ್‌ಗಳಲ್ಲಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ವಿದ್ಯಾರ್ಥಿಗಳ ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ "ಬಿ" ಸ್ಕೀಂ ಹೊರತುಪಡಿಸಿ ಉಳಿದ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕ, ಬೋಧನಾ ಶುಲ್ಕ, ಪ್ರಮಾಣ ಪತ್ರ ಶುಲ್ಕ, ಅಂಕಪಟ್ಟಿ ಶುಲ್ಕ ಮತ್ತು ಅಂತಿಮ ಪದವಿ ಪ್ರಮಾಣ ಪತ್ರದ ಶುಲ್ಕಗಳನ್ನು ಕಟ್ಟಿಸಿಕೊಳ್ಳಬಾರದೆಂದು ಸರ್ಕಾರದ ಆದೇಶವಿರುತ್ತದೆ. ಇದರಂತೆ ಕ್ರಮ ತೆಗೆದುಕೊಳ್ಳುವುದು.**

6. ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಅವರ ಪೋಷಕರ ಆದಾಯ ರೂ.2.5 ಲಕ್ಷಗಳು ಮೀರಿದಲ್ಲಿ ಅವರುಗಳಿಂದ ಪೂರ್ಣ ಪರೀಕ್ಷಾ ಶುಲ್ಕ ಸಂಗ್ರಹಿಸುವುದು.

7. ಪ್ರವರ್ಗ -1 ಮತ್ತು ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ಪಡೆಯಲು ಅರ್ಹರಾದ ಇತರೆ ವರ್ಗಗಳಿಗೆ (ಸಾಮಾನ್ಯ ವರ್ಗದವರನ್ನು ಒಳಗೊಂಡಂತೆ) ಸೇರಿದ ಅಭ್ಯರ್ಥಿಗಳಿಗೆ ಅವರ ಪೋಷಕರ ವಾರ್ಷಿಕ ವರಮಾನದ ಆಧಾರದ ಮೇಲೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ. ಆದರೂ ಅಂತ ಅಭ್ಯರ್ಥಿಗಳು ನಿಗದಿ ಪಡಿಸಿರುವ ಅಂಕಪಟ್ಟಿ ಶುಲ್ಕ **ರೂ.215.00** ಪಾವತಿಸಬೇಕು.

8. ಕ್ರ.ಸಂ.ಎ.ಸಿ.2/182/92-93, ದಿನಾಂಕ: 02-03-2000ರ ಕುಲಸಚಿವರ ಪತ್ರದಲ್ಲಿ ತಿಳಿಸಿರುವ ರೀತ್ಯಾ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ ಹಾಗೂ ಕ್ಯಾಟಗರಿ-1ರ ವರ್ಗದ ವಿದ್ಯಾರ್ಥಿಗಳು ಸದರಿ ಕೋರ್ಸನ್ನು ಮುಗಿಸಿದ ನಂತರ ರಿಪೀಟರ್ಸ್ ಆಗಿ ಪರೀಕ್ಷೆಗಳನ್ನು ತೆಗೆದುಕೊಂಡಲ್ಲಿ ಅಂತಹ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿ ಶುಲ್ಕಗಳನ್ನು ತಪ್ಪದೆ ವಸೂಲು ಮಾಡಬೇಕೆಂದು ತಿಳಿಸಲಾಗಿದೆ.

**ಕರಡು ಕು ,ಸಚಿವ (ಪರೀಕ್ಷಾಂಗ)**
**ಅವರಿಂದ ಅನುಮೋದಿಸಲ್ಪಟ್ಟಿದೆ.**

ಕುಲಸಚಿವ (ಪರೀಕ್ಷಾಂಗ)

ಗೆ :

1. ಪ್ರಾಂಶುಪಾಲರು, ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ, ಮೈಸೂರು.
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಪ್ರಾಜೆಕ್ಟ್ ಮ್ಯಾನೇಜರ್, ಐ.ಇ.ಎಂ, ಕ್ಯಾಂಪ್ ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಅಧ್ಯಕ್ಷರು, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ - ಈ ಅಧಿಸೂಚನೆಯನ್ನು ವಿಶ್ವವಿದ್ಯಾನಿಲಯ ವೆಬ್‌ಸೈಟ್‌ನಲ್ಲಿ Upload ಮಾಡಲು ಕೋರಿದೆ.
6. ಉಪಕುಲಸಚಿವರು(ಶೈಕ್ಷಣಿಕ), ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಸಂಖ್ಯಾತಜ್ಞರು, ಗಣಕ ಕೇಂದ್ರ, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಸಂಬಂಧಿಸಿದ ಉಪ ಕುಲಸಚಿವ / ಸಹಾಯಕ ಕುಲಸಚಿವ / ಅಧೀಕ್ಷಕರು / ಕಾರ್ಯನಿರ್ವಾಹಕರು, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಮಾನ್ಯ ಕುಲಪತಿ/ಕುಲಸಚಿವ / ಕುಲಸಚಿವ (ಪರೀಕ್ಷಾಂಗ) ಹಣಕಾಸು ಅಧಿಕಾರಿ ಅವರುಗಳ ಆಪ್ತ ಸಹಾಯಕರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
10. ಸಂಬಂಧಿಸಿದ ಕಡತಕ್ಕೆ.